# ಹಂಪಿ ಟೈಮ್ಸ್

HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY

ಸಂಪುಟ:01 • ಸಂಚಿಕೆ:192 • ನೋಂದಣಿ ನಂ.:KARKAN27911 • ವಿಜಯನಗರ • 24.12.2023 • ಭಾನುವಾರ • ಪುಟ:04 • ಬೆಲೆ:2
Volume:01 • Issue:192 • Reg.No:KARKAN27911 • VIJAYANAGARA • 24.12.2023 • Sunday • Page:04 • Rs:2



Spend LESS and get MORE publicity

BENEFITS OF ADVERTISING
in Local Leading HAMPI TIMES Newspaper

1. Flexibility
2. Timeliness
3. Affordability
4. Engaged audience
5. Positive response
6. Targeted demographic
7. Trustworthy medium
8. Design options



CALL US : 9448633038

Email us Your Advertisement Content to : hampitimes@gmail.com



ವಿಜಯನಗರ ಮತ್ತು ಬಳ್ಳಾರಿ ಜಿಲ್ಲೆಯ ಸಮಸ್ತ ರೈತರಿಗೆ ದಸರ ಹಾಗೂ ದೀಪಾವಳಿ ಹಬ್ಬಕ್ಕೆ ಸಹಕಾರ ನಿಡಿದ್ದಕ್ಕಾಗಿ ತುಂಬು ಹೃದಯದ ಧನ್ಯವಾದಗಳು

MASSEY FERGUSON

ವಿಜಯಶ್ರೀ ಮೋಟಾರ್ಸ್ ಟ್ರ್ಯಾಕ್ಟರ್ ವಿಭಾಗ TAFE




*ಟಿ.ಪಿ., ಇನ್ಸುರೆನ್ಸ್, ರಿಜಿಸ್ಟ್ರೇಶನ್ ಉಚಿತ

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ :
ವಿಜಯಶ್ರೀ ಮೋಟಾರ್ಸ್ ಟ್ರ್ಯಾಕ್ಟರ್ ವಿಭಾಗ
ಕೊಂಡನಾಯಕನಹಳ್ಳಿ, ಹಂಪಿ ರಸ್ತೆ, ಹೊಸಪೇಟೆ-583239.
ಮೊ: 9980127607, 7353306719

*ಷರತ್ತುಗಳು ಅನ್ವಯಿಸುತ್ತವೆ

ರೈತರ ಕೋರಿಕೆಯ ಮೇರೆಗೆ ಈ ಸ್ಕೀಂ ಇನ್ನೂ 25 ಗ್ರಾಹಕರಿಗೆ ಮಾತ್ರ ವಿಸ್ತರಿಸಲಾಗುವುದು (ಮೊದಲು ಬಂದವರಿಗೆ ಆದ್ಯತೆ)


# ಎಲ್ಲೆಲ್ಲೂ ವೈಕುಂಠಾಧಿಪತಿಯ ನಾಮಸ್ಮರಣೆ

## ಹೊಸಪೇಟೆ ತಾಲೂಕಿನ ನಾಗೇನಹಳ್ಳಿ ಶ್ರೀ ರಂಗನಾಥಸ್ವಾಮಿಗೆ ಹನುಮ ಮಾಲಾಧಾರಿಗಳಿಂದ ಏಕಾದಶಿ ವಿಶೇಷ ಪೂಜೆ


**ಹಂಪಿ ಟೈಮ್ಸ್ ಹೊಸಪೇಟೆ**


ವೈಕುಂಠ ಏಕಾದಶಿ ನಿಮಿತ್ತ ನಗರದ ವಿವಿಧ ಶ್ರೀವೆಂಕಟೇಶ್ವರ ಸ್ವಾಮಿ ದೇವಸ್ಥಾನಗಳಲ್ಲಿ ಹಾಗೂ ತಾಲೂಕಿನ ನಾಗೇನಹಳ್ಳಿ ಗ್ರಾಮದ ವಿಜಯನಗರ ಅರಸರ ಕಾಲದ ಶ್ರೀ ರಂಗನಾಥಸ್ವಾಮಿ ದೇವಸ್ಥಾನದಲ್ಲಿ ಶ್ರೀಸ್ವಾಮಿಗೆ ವಿಶೇಷ ಪೂಜೆ, ಅಭಿಷೇಕ, ಅಷ್ಟಾವಧನ, ಪುಷ್ಪಲಂಕಾರ ಮಹಾಮಂಗಳಾರತಿ ಜರುಗಿದವು. ನಗರದ ವಾಸವಿ ದೇವಸ್ಥಾನದಲ್ಲಿ ವೈಕುಂಠಾಧಿಪತಿಯ ದರ್ಶನಕ್ಕಾಗಿ ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ದರ್ಶನ ಪಡೆದರು. ವಿಜಯನಗರ ಅರಸ ಶ್ರೀಕೃಷ್ಣದೇವರಾಯ ತನ್ನ ತಾಯಿಯ ನೆನಪಾರ್ಥವಾಗಿ ನಿರ್ಮಾಣಗೊಂಡಿರುವ ನಾಗೇನಹಳ್ಳಿ ಅರಸನ ತಾಯಿಗೆ ಒಳಿತಾಗಲೆಂದು ಅಂದು ಈ ಗ್ರಾಮದಲ್ಲಿ ಶ್ರೀರಂಗನಾಥಸ್ವಾಮಿ ದೇಗುಲು, ಶ್ರೀ ಓಬಳೇಶ್ವರಸ್ವಾಮಿ ಹಾಗೂ ಕೆರೆಯನ್ನು ಕಟ್ಟಿಸಿದ್ದನು. ಆದರೆ ಇಲ್ಲಿನ ದೇಗುಲುಗಳು ಪುರಾತತ್ವ ಇಲಾಖೆಯ ವ್ಯಾಪ್ತಿಗೊಳಪಟ್ಟಿದ್ದರೂ, ಭಗ್ನಗೊಳ್ಳದ ಮೂರ್ತಿಗಳಿದ್ದರೂ ಜೀರ್ಣೋದ್ಧಾರ ಕಾರ್ಯಕ್ಕೆ ಸಂಬಂಧಿಸಿದ ಇಲಾಖೆಯರು, ಜಿಲ್ಲಾಡಳಿತ ಗಮನಹರಿಸದಿರುವು ಭಕ್ತರಿಗೆ ನೋವುಂಟುಮಾಡಿದೆ ಎನ್ನುತ್ತಿದ್ದಾರೆ ನಾಗೇನಹಳ್ಳಿ ಗ್ರಾಮದ ಭಕ್ತರು.

ತಾಲೂಕಿನ ಮರಿಯಮ್ಮನಹಳ್ಳಿಯ ಶ್ರೀವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ವೈಕುಂಠ ಏಕಾದಶಿಯಂದು ಶ್ರೀಸ್ವಾಮಿಗೆ ವಿಶೇಷ ಪೂಜೆ ನೆರವೇರಿಸಲಾಯಿತು.

**ಕೂಡ್ಲಿಗಿ:** ವೈಕುಂಠ ಏಕಾದಶಿ ಅಂಗವಾಗಿ ತಾಲೂಕಿನ ಕೈವಲ್ಯಾಪುರ ಗ್ರಾಮದ ಅನಂತ ಶಯನ ದೇವಸ್ತಾನದಲ್ಲಿ ವಿಶೇಷ ಪೂಜೆ ನಡೆಯಿತು. ಶನಿವಾರ ಬ್ರಾಹ್ಮಿ ಮುಹೂರ್ತದಲ್ಲಿ ಅನಂತ ಶಯನ ಸ್ವಾಮಿಗೆ ಪಂಚಾಮೃತ







ಅಭಿಷೇಕ,ಅಷ್ಟಾವಧನ, ಮಹಾ ಮಂಗಳಾರತಿ ಜರುಗಿದವು. ವೈಕುಂಠ ಏಕಾದಶಿ ನಿಮಿತ್ತ ಸ್ವಾಮಿಯ ಮೂರ್ತಿಗೆ ಗಂಧಲೇಪನ ಮಾಡಲಾಗಿತ್ತು. ಪ್ರಭಾವಳಿ ಸುತ್ತಲೂ ಹೂವಿನ ಅಲಂಕಾರ ಹಾಗೂ ತುಳಸಿ ಮಾಲೆಯ ಅಲಂಕಾರ ಮಾಡಲಾಗಿತ್ತು. ಭಕ್ತರು ಸ್ವಾಮಿಯ ದರ್ಶನ ಮಾಡಿ ವೈಕುಂಠ ಬಾಗಿಲ ಮೂಲಕ ತೆರಳಿದರೆ ಸ್ವರ್ಗಪ್ರಾಪ್ತಿ ಎನ್ನುವ ನಂಬಿಗೆಕೆ ಉತ್ತರ ಬಾಗಿಲನ್ನ ಬೆಳಿಗ್ಗೆ 4:15ಕ್ಕೆ ತೆರದಿದ್ದರು.ಭಕ್ತರು ಬೆಳಿಗ್ಗೆಯಿಂದಲೇ ವಿಷ್ಣುದೇವರ ದರ್ಶನ ಪಡೆದು ಕೃತಾರ್ಥರಾದರು .ಸ್ವಾಮಿಯ ಪ್ರಾಂಗಣದಲ್ಲಿಯೇ ಬರುವ ಭಕ್ತರಿಗೆ ವಿಷ್ಣು ನಾಮ ಹಣೆಗೆ ಧರಿಸಿದ ಸುಮಂಗಳೆಯರು, ಸ್ವಾಮಿಗೆ ಬೆಳಗಲು ತುಪ್ಪದ ದೀಪಗಳನ್ನ ನೀಡಿದರು.ನಂತರ ಸ್ವಾಮಿಯ ದರ್ಶನ ಪಡೆದು ಉತ್ತರ ದಿಕ್ಕಿನ ವೈಕುಂಠ ಬಾಗಿಲ ಮೂಲಕ ಪ್ರವೇಶ ಮಾಡಿ ಹೊರಬಂದು ಹರಕೆ ತೀರಿಸಿದ್ದು ಕಂಡು ಬಂದಿತು.ನಂತರ ಏಕಾದಶಿ ಕಾರಣ ಪ್ರಸಾದಕ್ಕೆ ಬಾಳೆಹಣ್ಣು,ಕಲ್ಲಂಗಡಿ, ದ್ರಾಕ್ಷಿ,ಸೌತೆಕಾಯಿ ಹಾಗೂ ಕಬ್ಬಿನ ಹಾಲನ್ನು ದರ್ಶನಕ್ಕೆ ಬಂದ ಸಾವಿರಾರು ಭಕ್ತರಿಗೂ ವಿನಿಯೋಗ ಮಾಡಿದರು.ವೈಕುಂಠ ಏಕಾದಶಿ ವಿಷ್ಣು ದೇವರ ದರ್ಶನ ಪಡೆಯಲು ಸಂಡೂರು,ಚೋರನೂರು,ಕೊಟ್ಟೂರು,ಹಗರಿ ಬೊಮ್ಮನಹಳ್ಳಿ ಸೇರಿದಂತೆ ಸುತ್ತಲಿನ ಅನೇಕ ಹಳ್ಳಿಗಳಿಂದ ಭಕ್ತರ ದಂಡೇ ಹರಿದು ಬಂದು ಸ್ವಾಮಿಯ ದರ್ಶನ ಭಾಗ್ಯ ಪಡೆದರು. ಸಂಜೆ 4:45 ರ ನಂತರ ಉತ್ತರ ಬಾಗಿಲನ್ನು ಮುಚ್ಚಿ,ಸಂಜೆ ಆರಕ್ಕೆ ಕಾರ್ತೀಕ ದೀಪಬೆಳಗಿದರು.ಈ ಸಂಧರ್ಭದಲ್ಲಿ ಗ್ರಾಮದ ನೂರಾರು ಭಕ್ತರು ಹಣತೆ ಹಚ್ಚಿದರು. ಪಟ್ಟಣದ ಆರ್ಯ ವೈಶ್ಯ ಸಮಾಜದ ಮಹಿಳೆಯರು ವಿಷ್ಣು ನಾಮವಳಿಗಳ ಭಜನೆ ಮಾಡಿದ್ದು ವಿಶೇಷವಾಗಿತ್ತು.

ಮೈಕ್ರೋ ನ್ಯೂಸ್

## ಕೃಷಿ ಭಾಗ್ಯ ಯೋಜನೆ: ಅರ್ಜಿ ಸಲ್ಲಿಸಲು ಡಿ.31 ಕೊನೆದಿನ

**ಹಂಪಿ ಟೈಮ್ಸ್ ಕೊಪ್ಪಳ**

2023–24ನೇ ಸಾಲಿನಲ್ಲಿ ಕೃಷಿ ಭಾಗ್ಯ ಯೋಜನೆಗೆ ರೈತ ಭಾಂದವರು ಡಿಸೆಂಬರ್ 31ರೊಳಗೆ ಸಂಬಂಧಪಟ್ಟ ರೈತ ಸಂಪರ್ಕ ಕೇಂದ್ರಕ್ಕೆ ಭೇಟಿ ನೀಡಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಅರ್ಜಿಯ ನಮೂನೆಗಳು ಸಮೀಪದ ರೈತ ಸಂಪರ್ಕ ಕೇಂದ್ರಗಳಲ್ಲಿ ಲಭ್ಯವಿರುತ್ತವೆ. ರೈತರು ಕನಿಷ್ಟ 1 ಎಕರೆ ಜಮೀನನ್ನು ಹೊಂದಿರಬೇಕು. ಸದರಿ ಯೋಜನೆಯು ಒಣ ವಲಯ ಕ್ಷೇತ್ರದ ರೈತರಿಗೆ ಮಾತ್ರ ಸಂಬಂಧಪಟ್ಟಿರುತ್ತದೆ. ಕ್ಷೇತ್ರಬದು ನಿರ್ಮಾಣ, ಕೃಷಿ ಹೊಂಡ, ನೀರು ಇಂಗದಂತೆ ತಡೆಯಲು ಪಾಲಿಥಿನ್ ಹೊದಿಕೆ, ಕೃಷಿ ಹೊಂಡದ ಸುತ್ತಲೂ ತಂತಿ ಬೇಲಿ, ಕೃಷಿ ಹೊಂಡದಿಂದ ನೀರು ಎತ್ತಲು ಡಿಸೇಲ್/ ಪೆಟ್ರೋಲ್ ಪಂಪ್ಸೆಟ್ ಹಾಗೂ ನೀರನ್ನು ಬೆಳೆಗೆ ಹಾಯಿಸಲು ಸೂಕ್ಷ್ಮ (ತುಂತುರು ಹನಿ) ನೀರಾವರಿ ಸೇರಿದಂತೆ ನಾನಾ ಸೌಲಭ್ಯಗಳನ್ನು ನಿಯಮಾನುಸಾರ ನೀಡಲಾಗುವುದು ಒಂದುವೇಳೆ ಸಂಬಂಧಪಟ್ಟ ತಾಲೂಕಿಗೆ / ಹೋಬಳಿಗೆ ನಿಗಧಿಪಡಿಸಿದ ಗುರಿಗಿಂತ ಹೆಚ್ಚು ಅರ್ಜಿಗಳು ಸ್ವೀಕೃತವಾದರೆ ಲಾಟರಿ ಎತ್ತುವ ಮೂಲಕ ಫಲಾನುಭವಿಗಳನ್ನು ಗುರಿಗಳನ್ವಯ ಆಯ್ಕೆಮಾಡಲಾಗುವುದು. ರೈತರು ತಮ್ಮ ಜಮೀನುಗಳಲ್ಲಿ ಕೃಷಿ ಹೊಂಡಗಳನ್ನು ನಿರ್ಮಿಸಿಕೊಂಡು ಮಳೆ ನೀರನ್ನು ಸಂಗ್ರಹಿಸಿ ಬೆಳೆಗಳ ಸಂದಿಗ್ದ ಹಂತದಲ್ಲಿ ರಕ್ಷಣಾತ್ಮಕ ನೀರಾವರಿ ಒದಗಿಸುವುದು ಕೃಷಿ ಭಾಗ್ಯ ಯೋಜನೆಯ ಉದ್ದೇಶವಾಗಿದ್ದು, ಮೇಲೆ ತಿಳಿಸಿದ ಎಲ್ಲಾ ಘಟಕಗಳನ್ನು ಕಡ್ಡಾಯವಾಗಿ ಅನುಷ್ಠಾನ ಮಾಡಬೇಕು ಎಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.


HAMPI TIMES
Leading District News Paper in Vijayanagara
CONTACT FOR
EVENT COVERAGE
& Advertisements
9448633038







# ಸೇವಾ ಗುಣವಿದ್ದರೆ ಬದುಕು ಸಾರ್ಥಕ

## ನಿವೃತ್ತ ಉಪನ್ಯಾಸಕ ವೈ.ಯಮುನೇಶ್ ಅಭಿಮತ | ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ಶಿಬಿರ

**ಹಂಪಿ ಟೈಮ್ಸ್ ಹೊಸಪೇಟೆ**

ಸೇವೆಯ ಮೂಲಕವೇ ಶಿಕ್ಷಣ ದೊರಕಿಸಿ ಸೇವಾ ಮನೋಭಾವನೆ ಬೆಳೆಸಿಕೊಳ್ಳಬೇಕು. ಜವಾಬ್ದಾರಿ ಸ್ಥಾನ ಪಡೆದುಕೊಳ್ಳುವಂತರಾಗಬೇಕು. ಸದಾ ಸೇವೆಗೆ ಸಿದ್ಧರಾಗುವಂಥ ನಾಯಕತ್ವದ ಗುಣ ಬೆಳೆಸಿಕೊಂಡಾಗ ಬದುಕು ಸಾರ್ಥಕವಾಗುತ್ತದೆ ಮತ್ತು ಪರಿವರ್ತನೆಯ ಕಾಲವಾಗಬೇಕು ಎಂದು ವೈ.ಯಮುನೇಶ್ ಹೇಳಿದರು.

ಇಲ್ಲಿನ ಬಾಲಕಿಯರ ಸರಕಾರಿ ಪದವಿ ಪೂರ್ವ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕದ ವಾರ್ಷಿಕ ವಿಶೇಷ ಶಿಬಿರ ರಾಜ್ಯ ಸರಕಾರಿ ನೌಕರರ ಭವನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಸ್ವಾತಂತ್ರ್ಯ ಪಡೆದ ನಂತರ ಮಹಾತ್ಮ ಗಾಂಧಿಯವರ ಒಂದು ನೂರು ವರ್ಷಗಳ ಸವಿನೆನಪಿಗಾಗಿ ಅವರ ಕನಸಿನ ಕೂಸಾಗಿ ರಾಷ್ಟ್ರೀಯ ಸೇವಾ ಯೋಜನೆ ಘಟಕ ಸ್ಥಾಪನೆ ಮಾಡಲಾಯಿತು. ವಿವೇಕಾನಂದರ ರಾಷ್ಟ್ರಪ್ರೇಮದ ಬೀಜ ಬಿತ್ತುವ ಕೆಲಸ ಈ ಕಾರ್ಯದಿಂದ ಸಾಬೀತಾಗಿದೆ. ಶ್ರಮದಾನ ದೇಶಭಕ್ತಿಯಂಥ ಕಾರ್ಯ ಎನ್ಎಸ್ಎಸ್ ನಿಂದ ಆಗಬೇಕಿದೆ ಎಂದರು.



ಪ್ರಾಚಾಯ ನಾಗರಾಜ ಹವಾಲ್ದಾರ್ ಮಾತನಾಡಿ, ದೇಶಕ್ಕೆ ಸೇವಾ ಮನೋಭಾವದ ಅವಶ್ಯಕತೆಯಿದೆ. ದೇಶದ ನಿಜವಾದ ಆಸ್ತಿ ಯುವ ಜನರು. ಸಂಸ್ಕೃತಿ ಸಂಸ್ಕಾರ ಮೈಗೂಡಬೇಕೆಂದರೆ ಬಡತನದಿಂದ ಬಂದವರಲ್ಲಿ ಮಾತ್ರ ಕಾಣುತ್ತೇವೆ. ಸಹಕಾರ ಸಹಬಾಳ್ವೆ ಕಲಿಯುವುದು ಇಂಥ ಸೇವೆಯಿಂದ ಮಾತ್ರ ಸಾಧ್ಯ ಎಂದು ಹೇಳಿದರು.

ಕರ್ನಾಟಕ ರಾಜ್ಯ ನೌಕರರ ಸಂಘದ ಪ್ರಧಾನ ಕಾಯದರ್ಶಿಗಳಾದ ಕಡ್ಲಿ ವೀರಭದ್ರಪ್ರ, ನಿವೃತ್ತ ಪ್ರಾಚಾಯ ಜೆ. ಸಿದ್ರಾಮ್ ಮಾತನಾಡಿದರು.

ಪ್ರಾಚಾರ್ಯ ಎಸ್. ಕೆ. ಅನ್ಸರ್ ಭಾಷು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶಿಬಿರಾಧಿಕಾರಿ ವಿಜಯಭಾಸ್ಕರ್ ಉಪಸ್ಥಿತರಿದ್ದರು. ಉಪನ್ಯಾಸಕರಾದ ಡಾ.ದಯಾನಂದ ಕಿನ್ನಾಳ್, ಜಿ.ಹನುಮಂತಪ್ಪ, ಡಾ. ಪಾರ್ವತಿ. ಖಿ. ಮಲ್ಲಿಕಾರ್ಜುನ. ವಿನಯ ಕುಮಾರ. ಬಂಡೆ ರಾಮಾಲೆಪ್ಪ . ಸುಮಂಗಳ – ಚೈತ್ರ. ಲಕ್ಷ್ಮಿ ಹಾಗೂ ಬೋದಕೇತರ ಸಿಬ್ಬಂದಿ ಹಸಿನಾ ಬೇಗಂ. ನೀಲಿಮಾ ಇದ್ದರು. ಶಿಬಿರಾರ್ಥಿಗಳಾದ ಅಂಬಿಕ, ದ್ರಾಕ್ಷಾಯಿಣಿ ಹಾಗೂ ಕಾವ್ಯ ನಿರ್ವಹಿಸಿದರು.

# ಶ್ರೀ ಶನೇಶ್ವರ ಕಾರ್ತೀಕೋತ್ಸವ

## ಟಿ.ಬಿ.ಡ್ಯಾಂ ಪಂಚಾಚಾರ್ಯನಗರದಲ್ಲಿ ದೀಪೋತ್ಸವ



**ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಹೊರವಲಯದ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿರುವ ಶ್ರೀ ಪಂಚಾಚಾರ್ಯನಗರದಲ್ಲಿರುವ ಶ್ರೀ ಶನೇಶ್ವರ ದೇವಸ್ಥಾನದಲ್ಲಿ ಶನಿವಾರ ಕಾರ್ತೀಕೋತ್ಸವ ದೀಪಗಳನ್ನು ಭಕ್ತರು ಬೆಳಗಿದರು.

ಬೆಳಿಗ್ಗೆ ಶ್ರೀ ಶನೇಶ್ವರ ಸ್ವಾಮಿಗೆ ವಿಶೇಷ ಪೂಜೆ, ಅಭಿಷೇಕ, ಪುಷ್ಪಲಂಕಾರ ನೆರವೇರಿಸಲಾಯಿತು. ಬೆಳಿಗ್ಗೆಯಿಂದಲೇ ಭಕ್ತರು ನಾಡಿನ ನಾನಾಕಡೆಗಳಿಂದ ಆಗಮಿಸಿ ಪೂಜೆ ಸಲ್ಲಿಸಿದರು. ಸಂಜೆ ಕಾರ್ತೀಕ ದೀಪೋತ್ಸವದಲ್ಲಿ ಮಕ್ಕಳು, ಮಹಿಳೆಯರು ಸೇರಿದಂತೆ ಭಕ್ತಾದಿಗಳು ಸಂಭ್ರಮದಿಂದ ಪಾಲ್ಗೊಂಡು ದೀಪದಿಂದ ದೀಪ ಹಚ್ಚಿದರು.




10% BETTER EFFICIENCY
EASY TO OPERATE
LOW SERVICE COST
LIGHTER
0 TO 50° C
SERVICE EFFICIENCY
EXTENDED SERVICE INTERVALS
HEAVY DUTY AIR FILTER
HIGH RESELL VALUE



Grow Your Business
With Us
S.M.Traders & Services
Atlas Copco
9686663125 - 9686663132 - 9686413132